ಹಾಗೆ, 20 ಕೋಟಿ 25 ಲಕ್ಷ ರೂಪಾಯಿಗಳು ಗೌರ್ನ್‌ಮೆಂಟ್ ಆಫ್ ಇಂಡಿಯಾದು, ಉಳಿದಿರತಕ್ಕಂಥಾದ್ದು ನಮ್ಮ ರಾಜ್ಯಕ್ಕೆ ಬರುತ್ತದೆ. ಅನಂತರ ನಾವು ಪದೇ ಪದೇ ಹೇಳಿದ್ದೇವೆ. ನಮ್ಮಲ್ಲಿರತಕ್ಕಂಥ ಪ್ಲಾನ್ ಫಂಡ್ ಏನಿದೆ, ನೀವು ಅದನ್ನು ಮುಟ್ಟಕೂಡದು, ನಮ್ಮ ಪ್ಲಾನ್ ಫಂಡ್ ಉಳಿಯಬೇಕೆಂಬುದು ನಮ್ಮ ವಾದ. ಏಕೆಂದರೆ, ಇವರು ಕನ್ವರ್ಟ್ ಮಾಡುತ್ತಾರ ಹೋಗುವುದು, ಮತ್ತೊಂದು ಮಾಡುವುದು, ಅದರಿಂದ ನಮಗೆ ಕಟ್ ಆಗುತ್ತದೆ. ಅದನ್ನು ಮಾಡಕೂಡದು ಎಂಬ ಮಾತನ್ನು ನಾವು ಪದೇ ಪದೇ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ.

ಶ್ರೀ ಜಿ. ರಾಜುಗೌಡ : ಅಧ್ಯಕ್ಷರೇ ಈ ಕ್ಯಲಾಮಿಟಿ ರಿಲೀಫ್ ಫಂಡ್ ಎನ್ನುವುದು ಯಾವಾಗ ಸೃಷ್ಟಿಯಾಯಿತು? ಈವರೆಗೆ ಅದಕ್ಕೆ ಎಷ್ಟು ಹಣ ಹೂಡಿದ್ದೀರಿ, ಇದರಲ್ಲಿ ರಾಜ್ಯದ ಪಾಲು ಎಷ್ಟು? ಕೇಂದ್ರದ ಪಾಲು ಎಷ್ಟು? ತಾವು ಈವರೆಗೆ ಆ ನಿಧಿಯಿಂದ ಎಷ್ಟು ಹಣವನ್ನು ಪಡೆದಿದ್ದೀರಿ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು ಈಗಾಗಲೇ ತಿಳಿಸಿದ್ದೇನೆ. ಶ್ರೀಮಾನ್ ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಈ ಕ್ಯಲಾಮಿಟಿ ರಿಲೀಫ್ ಫಂಡ್ ಅನ್ನು ಕ್ರಿಯೇಟ್ ಮಾಡಿದ್ದಾರೆ. ಇದೊಂದು ಹೊಸ ಸೂತ್ರ. 3:4 ಭಾಗ ಹಣ ಎಂದರೆ ಎಷ್ಟಾಗುತ್ತದೆ ಎಂಬ ಲೇಟೆಸ್ಟ್ ವಿವರಗಳನ್ನು ಕಂದಾಯ ಸಚಿವರಿಂದ ಪಡೆಯಬೇಕಾಗುತ್ತದೆ. ಅವರಿಂದ ಪಡೆದುಕೊಡುತ್ತೇನೆ. 1990-91ಕ್ಕೆ ಸಂಬಂಧಪಟ್ಟಂತೆ ಮಾತ್ರ ನಾನು ಈಗ ಕೊಟ್ಟಿದ್ದೇನೆ. 20 ಕೋಟಿ 25 ಲಕ್ಷ ರೂಪಾಯಿಗಳು ಅವರದು, ಉಳಿದಿರತಕ್ಕಂಥ 6 ಕೋಟಿ 75 ಲಕ್ಷ ರೂಪಾಯಿಗಳು ನಮ್ಮ ಷೇರಿನ ಹಣ. ಅದನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಪೂಜಾ ಸ್ಥಳಗಳ ನೆಲಸಮ ಹಾಗೂ ನಾಶ

2112 - ಶ್ರೀ ಎ.ಎಂ. ಹಿಂದುಸಗೇರಿ (ಹುಬ್ಬಳ್ಳಿ) : ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ಟೋಬರ್, ನವೆಂಬರ್ ಮತ್ತು ನಂತರದ ದಿನಗಳಲ್ಲಿ ಕೋಮು ಗಲಭೆಗಳಲ್ಲಿ ರಾಜ್ಯದಲ್ಲಿ ಜಖಿಂ ಆದ, ಹಾಳುಗೆಡವಿದ ಹಾಗೂ ನಾಶಪಡಿಸಿದ ಪೂಜಾ ಸ್ಥಳಗಳ ಸಂಖ್ಯೆ ಎಷ್ಟು? ಇದಗಾಗಳು, ರುದ್ರ ಭೂಮಿ, ಶಾಲೆಗಳು (ಮದರಾಸುಗಳು), ಮಸೀದಿಗಳು ಮತ್ತು ಹಿಂದೂ ದೇವಾಲಯಗಳ ಜಿಲ್ಲಾವಾರು ಸಂಖ್ಯೆ ಎಷ್ಟು?

ಆ) ಈ ಮೇಲಿನವುಗಳಲ್ಲಿ ಎಷ್ಟು ಪೂಜಾ ಸ್ಥಳಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ. ದುರಸ್ತಿ ಮಾಡಲಾಗಿದೆ ಅಥವಾ ಪುನರ್ ನಿರ್ಮಾಣ ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಪೂಜಾ ಸ್ಥಳಗಳು ದುರಸ್ತಿ ಆಗಬೇಕಾಗಿವೆ (ಜಿಲ್ಲಾವಾರು ಅಂಕಿಗಳನ್ನು ಕೊಡಿ)

ಇ) ರಾಜ್ಯದಲ್ಲಿ ಹಾನಿಗೊಳಗಾದ ಪೂಜಾ ಸ್ಥಳಗಳ ಜೀರ್ಣೋದ್ಧಾರಕ್ಕಾಗಿ, ದುರಸ್ತಿಗಾಗಿ ಮತ್ತು ಪುನರ್ ನಿರ್ಮಾಣಕ್ಕಾಗಿ ಮಾಡಿದ ಒಟ್ಟು ಖರ್ಚು ಏನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

ಅ) 198.

ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದ ಅನುಬಂಧಗಳಲ್ಲಿ ಕೊಡಲಾಗಿದೆ.

ಆ) 190.

ರಿಪೇರಿ ಪುನರ್ ನಿರ್ಮಾಣ ವಗೈರೆ ಸ್ಥಳಗಳ ವಿವರಗಳನ್ನು ಅನುಬಂಧದಲ್ಲಿ ತೊರಿಸಲಾಗಿದೆ. ಇನ್ನೂ ರಿಪೇರಿ ಮಾಡದವುಗಳ ಸಂಖ್ಯೆ - 8 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) 20,45,369-00 ರೂಪಾಯಿಗಳು.

ಅನುಬಂಧ

ವಿಧಾನ ಸಭಾ ಸದಸ್ಯರಾದ ಶ್ರೀ ಎ.ಎಂ. ಹಿಂದುಸಗೇರಿ (ಹುಬ್ಬಳ್ಳಿ)ಯವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨೧೧೨ ಕ್ಕೆ ಉತ್ತರ.
ಸಂಖ್ಯೆ:ಹೆಚ್‌ಡಿ ೫೦೧ ಎಸ್‌ಎಸ್‌ಟಿ ೯೧

ಪೂಜಾ ಮಂದಿರಗಳ ವಿವರ	ಆಕ್ಟೋಬರ್, ನವೆಂಬರ್ ಹಾಗೂ ಅಲ್ಲಿಂದೀಚೆಗೆ ಕೋಮು ಗಲಭೆಗಳಲ್ಲಿ ಹಾನಿಗೊಳಗಾದ, ಕೆಡವಿದ, ನಾಶಪಡಿಸಿದ ಪೂಜಾ ಮಂದಿರಗಳ ಸಂಖ್ಯೆ	ಕಟ್ಟಿದ, ರಿಪೇರಿಯಾದ, ಪೂರ್ವಸ್ಥಿತಿಗೆ ತಂದ ಅಂಥ ಪೂಜಾಮಂದಿರಗಳ ಸಂಖ್ಯೆ	ಇನ್ನೂ ರಿಪೇರಿ ಆಗಬೇಕಾಗಿರುವ ಅಂಥ ಪೂಜಾ ಮಂದಿರಗಳ ಸಂಖ್ಯೆ	ಅಂಥ ಪೂಜಾಮಂದಿರಗಳನ್ನು ಪೂರ್ವಸ್ಥಿತಿಗೆ ತರಲು, ರಿಪೇರಿ ಮಾಡಲು ಹಾಗೂ ಕಟ್ಟುವುದಕ್ಕೆ ತಗುಲಿದ ಒಟ್ಟು ಖರ್ಚು
1	2	3	4	5
1. ಬೆಂಗಳೂರು ನಗರ ಜಿಲ್ಲೆ:				
ಅ) ಮಸೀದಿಗಳು :	9	9	- -	ಒಟ್ಟು ರೂ. 1,58,000-00
ಆ) ಇದಗಾಗಳು :	10	10	- -	
ಇ) ರುದ್ರಭೂಮಿಗಳು:	1	1	- -	
ಈ) ಶಾಲೆಗಳು :	1	1	- -	
ಉ) ದೇವಸ್ಥಾನಗಳು :	1	1	- -	
2. ಬೆಳಗಾವಿ ಜಿಲ್ಲೆ :	ಮತೀಯ ಗಲಭೆಗಳು ನಡೆದಿಲ್ಲ.			
3. ಬೀದರ್ ಜಿಲ್ಲೆ : ಮತೀಯ ಗಲಭೆಗಳಲ್ಲಿ ಯಾವುದೇ ಪೂಜಾಮಂದಿರಗಳು ನಾಶವಾಗಿಲ್ಲ ಮತ್ತು ಹಾನಿಗೊಳಗಾಗಿಲ್ಲ.				
4. ಬಿಜಾಪುರ ಜಿಲ್ಲೆ				
ಅ) ಮಸೀದಿಗಳು :	1	1	- -	ಒಟ್ಟು ರೂ. 79,512-00
ಆ) ದರ್ಗಾಗಳು	3	3	- -	
ಇ) ಇದಗಾಗಳು :	3	3	- -	

1.	2.	3.	4.	5.
5. ಚಿಕ್ಕಮಗಳೂರು ಜಿಲ್ಲೆ:				
ಅ) ಮಸೀದಿಗಳು :	4	4	- -	ರೂ. 27,050-00
ಆ) ಇದಗಾಗಳು :	1	1	- -	ರೂ. 7,500-00
ಇ) ದರ್ಗಾಗಳು	1	1	- -	ರೂ. 20,900-00
ಈ) ಚಾಂದನಿ ಮಿನಾರ :	1	1	- -	ರೂ. 7,500-00
6. ಬಳ್ಳಾರಿ ಜಿಲ್ಲೆ:	ಇಲ್ಲ	ಇಲ್ಲ	ಇಲ್ಲ	ಇಲ್ಲ
7. ಹಾಸನ ಜಿಲ್ಲೆ:	ಇಲ್ಲ	ಇಲ್ಲ	ಇಲ್ಲ	ಇಲ್ಲ
8. ಚಿತ್ರದುರ್ಗ ಜಿಲ್ಲೆ:	ಇಲ್ಲ	ಇಲ್ಲ	ಇಲ್ಲ	ಇಲ್ಲ
ಅ) ಮಸೀದಿಗಳು :	5	5	- -	ಒಟ್ಟು ರೂ. 2,21,250-00
ಆ) ಇದಗಾಗಳು :	14	14	- -	
ಇ) ಶಾಲೆಗಳು	1	1	- -	
ಈ) ದೇವಾಲಯಗಳು	1	1	- -	
ಉ) ಸರ್ಕಾರೀ ಉರ್ದು ಶಾಲೆ:	1	1	- -	
ಉ) ದರ್ಗಾಗಳು:	2	2	- -	
9. ಧಾರವಾಡ ಜಿಲ್ಲೆ:				
ಅ) ಜಂದಾಕಟ್ಟೆ	1	1	- -	ಒಟ್ಟು ರೂ. 5,690-00
10. ದಕ್ಷಿಣ ಕನ್ನಡ ಜಿಲ್ಲೆ:				
ಅ) ಮಸೀದಿಗಳು	7	7	- -	ಒಟ್ಟು ರೂ. 91,490-00
11. ಗುಲ್ಬರ್ಗಾ ಜಿಲ್ಲೆ:				

ಆ) ಇದಗಾ:	1	1	- -	ಒಟ್ಟು ರೂ. 13,000-00
12. ಕೋಲಾರ ಜಿಲ್ಲೆ:				
ಅ) ದರ್ಗಾಗಳು	10	10	- -	ಒಟ್ಟು ರೂ. 1,13,096-00
ಆ) ಇದಗಾಗಳು	18	16	2 (ಕೆಲಸ ಪ್ರಗತಿಯಲ್ಲಿದೆ)	
13. ಕೊಡಗು ಜಿಲ್ಲೆ:				
ಅ) ಮಸೀದಿಗಳು	6	6	- -	ರೂ. 55,680-00
ಆ) ದೇವಾಲಯಗಳು	1	1	- -	ರೂ. 300-00
14. ಮಂಡ್ಯ ಜಿಲ್ಲೆ:				
ಅ) ಮಸೀದಿಗಳು	8	8	- -	ಒಟ್ಟು ರೂ. 75,000-00
15. ಮೈಸೂರು ಜಿಲ್ಲೆ:				
ಅ) ಮಸೀದಿಗಳು	2	2	- -	ಒಟ್ಟು ರೂ. 62,300-00
ಆ) ಇದಗಾಗಳು	4	4	- -	
16. ಶಿವಮೊಗ್ಗ ಜಿಲ್ಲೆ:				
ಅ) ಇದಗಾಗಳು	2	2	- -	ಒಟ್ಟು ರೂ. 28,800-00
ಆ) ದರ್ಗಾಗಳು	1	1	- -	
17. ತುಮಕೂರು ಜಿಲ್ಲೆ:				

ಆ) ಮಸೀದಿಗಳು	3	3	- -	ಒಟ್ಟು ರೂ. 2,48,001-00
ಆ) ಇದಗಾಗಳು	30	30	- -	
ಇ) ರುದ್ರಭೂಮಿಗಳು	2	1	1 (ಜಮೀನು ವಿವಾದ ಇದೆ)	
ಈ) ದರ್ಗಾಗಳು	5	5	- -	
ಉ) ದೇವಸ್ಥಾನಗಳು	1	-	1 (ಕೆಲಸ ಪ್ರಗತಿಯಲ್ಲಿದೆ)	
18. ಕಾರವಾರ ಜಿಲ್ಲೆ:				
ಆ) ಮಸೀದಿಗಳು:	2	2	- -	ಒಟ್ಟು ರೂ. 7.500-00
19. ರಾಯಚೂರು ಜಿಲ್ಲೆ:				
ಆ) ಮಸೀದಿಗಳು:	3	3	- -	ಒಟ್ಟು ರೂ. 45,000-00
ಆ) ಇದಗಾಗಳು	1	- -	1	
20. ಬೆಂಗಳೂರು ಗ್ರಾಮಾಂತರ ಜಿಲ್ಲೆ:				
ಆ) ಮಸೀದಿಗಳು:	8	7	1 (ಕೆಲಸ ಪ್ರಗತಿಯಲ್ಲಿದೆ)	ಒಟ್ಟು ರೂ. 7,85,3 00-00
ಆ) ಇದಗಾಗಳು	14	14	- -	
ಇ) ದರ್ಗಾಗಳು	8	6	2 (ಕೆಲಸ ಪ್ರಗತಿಯಲ್ಲಿದೆ)	
ಈ)				

ಶ್ರೀ ಎ.ಎಂ. ಹಿಂಡಸಗೇರಿ : ಅಧ್ಯಕ್ಷರೇ, ಅಕ್ಟೋಬರ್, ನವೆಂಬರ್ ಮತ್ತು ಅನಂತರ ನಮ್ಮ ರಾಜ್ಯದಲ್ಲಿ ಕೋಮು ಗಲಭೆಯಾಗಿ 198 ಮಸೀದಿ, ಇದ್ಗಾ ಮತ್ತು ಇನ್ನಿತರ ಸಂಸ್ಥೆಗಳನ್ನು ನಾಶ ಮಾಡಲಾಗಿದೆ. ಅದರಲ್ಲಿ 190 ಸಂಸ್ಥೆಗಳು ರಿಪೇರಿಯಾಗಿವೆ. ಇನ್ನೂ ಎಂಟು ರಿಪೇರಿ ಆಗಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈವರೆಗೆ ಎಂಟು ಮಸೀದಿ ದರ್ಗಾ ಮತ್ತು ಇನ್ನಿತರ ಪ್ರಾರ್ಥನಾ ಸ್ಥಳಗಳು ಏಕೆ ರಿಪೇರಿ ಆಗಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ರೀಸೆಂಟಾಗಿ ಎಲ್ಲಾ ಕಡೆ ಕೋಮು ಗಲಭೆಗಳು ನಡೆದ ಪರಿಣಾಮವಾಗಿ ಎಲ್ಲೆಲ್ಲಿ ಮದರಸಾಗಳು ಮತ್ತು ಮಸೀದಿಗಳು ಹಾಳಾಗಿವೆ, ಅದನ್ನೆಲ್ಲಾ ರಿಪೇರಿ ಮಾಡುವುದಕ್ಕೆ 21 ಲಕ್ಷ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದೇವೆ. ಕೆಲವು ಕಡೆ ರಿಪೇರಿ ಮಾಡುವ ಕೆಲಸ ಉಳಿದಿದೆ. ಅದಕ್ಕೆ ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದೇನೆ.

ಶ್ರೀ ಎ.ಎಂ. ಹಿಂದುಸಗೇರಿ : ಇದರಲ್ಲಿ ಸಾರ್ವಜನಿಕ ಆಸ್ತಿಗಳು, ವಿಶೇಷವಾಗಿ ಮಾವಿನ ಗಿಡಗಳು ಮತ್ತು ಇನ್ನಿತರ ಪ್ರಾಪರ್ಟಿ ಹಾಳಾಗಿದೆ. ಸರ್ಕಾರ ಇದಕ್ಕಾಗಿ ಯಾವ ಕ್ರಮ ಕೈಗೊಂಡಿದೆ? ಮತ್ತು ಈ ಗಲಭೆಯಲ್ಲಿ ತೊಡಗಿದ್ದವರಿಗೆ ಶಿಕ್ಷೆ ಕೊಟ್ಟಿದೆಯೇ? ಎಂದು ತಮ್ಮ ಮುಖಾಂತರ ಪ್ರಶ್ನೆ ಕೇಳುತ್ತಿದ್ದೇನೆ.

9.45 ಪಿ.ಎಂ.

ಶ್ರೀ ಧರ್ಮಸಿಂಗ್ : ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಏಕೆಂದರೆ ಈಗ ಮಸೀದಿ ಈದ್ಗಾ ಮತ್ತು ಬೇರೆ ಬೇರೆ ಮಿನಾರ್‌ಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಉತ್ತರವನ್ನು ಕೊಟ್ಟಿದ್ದೇನೆ. ಮಾವಿನ ಗಿಡಗಳ ಬಗ್ಗೆ , ತೋಟದ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಅದಕ್ಕೂ ಉತ್ತರವನ್ನು ಕೊಡುತ್ತೇನೆ.

ಶ್ರೀ ಎ.ಎಂ. ಹಿಂಡಸಗೇರಿ : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ communal riots ನಲ್ಲಿ ಎಷ್ಟು ಕೇಸ್‌ಗಳು ಇವೆ ಅವೆಲ್ಲವನ್ನು ವಿತ್‌ಡ್ರಾ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದ್ದರಿಂದ, ಈ ಕೇಸ್‌ಗಳನ್ನು ವಿತ್‌ಡ್ರಾ ಮಾಡುವ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ಈ ಕೇಸ್‌ಗಳನ್ನು ಸಾಕಷ್ಟು ವಿತ್‌ಡ್ರಾ ಮಾಡಿದ್ದೇವೆ. ಈಗಾಗಲೇ ನಮ್ಮಲ್ಲಿ 815 ಕೇಸ್‌ಗಳು ಇವೆ. ಅದರಲ್ಲಿ 314ನ್ನು ವಿತ್‌ಡ್ರಾ ಮಾಡಿದ್ದೇವೆ ಮತ್ತು ಮುಂದೆ ಸಹ ಕೇಸ್‌ಗಳನ್ನು ವಾರಸುದಾರರ ಪ್ರಕಾರ ವಿತ್‌ಡ್ರಾ ಮಾಡುತ್ತೇವೆ.

ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರ ನೀಡಿದ ಹಣ.

2126 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) *1989 ರಿಂದ 1991 ರವರೆಗೆ ಸರ್ಕಾರದಿಂದ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರದಿಂದ ನೀಡಿದ ಹಣವೆಷ್ಟು? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರಗಳನ್ನು ತಿಳಿಸುವುದು)*